# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಂ :

ಸಂಖ್ಯೆ:ದಾವಿವಿ/ಶೈವಿ/258/2026-27/2178 ದಿನಾಂಕ:03.10.2026

## ಅಧಿಸೂಚನೆ

**ವಿಷಯ:** ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಹಾಗೂ ಸಂಲಗ್ನಗೊಂಡ ಸ್ನಾತಕೋತ್ತರ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಖಾಲಿ ಉಳಿಯಲಿರುವ Master of Business Administration (MBA) ಸೀಟುಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:01.10.2026

******

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಹಾಗೂ ಸಂಲಗ್ನಗೊಂಡ ಸ್ನಾತಕೋತ್ತರ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ PG CET ಮೂಲಕ ಭರ್ತಿಯಾಗದ ಖಾಲಿ ಉಳಿಯಲಿರುವ Master of Business Administration (MBA) ಪದವಿಯ ಖಾಲಿ ಸ್ಥಾನಗಳಿಗೆ ಪ್ರವೇಶಾತಿ ನೀಡಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮುಂದುವರೆದು, ಖಾಲಿ ಉಳಿಯಲಿರುವ ಸೀಟುಗಳಿಗೆ ಆಸಕ್ತ ವಿದ್ಯಾರ್ಥಿಗಳು ದಿನಾಂಕ:05.10.2026 ರಿಂದ ದಿನಾಂಕ:12.10.2026 ರೊಳಗಾಗಿ ಅರ್ಜಿಯನ್ನು, ವಿಶ್ವವಿದ್ಯಾನಿಲಯದ **ವೆಬ್‌ಸೈಟ್:** www.davangereuniversity.ac.in **ಮೂಲಕ ಡೌನಲೋಡ್ ಮಾಡಿಕೊಂಡು** ಅರ್ಜಿಯನ್ನು ವಿಶ್ವವಿದ್ಯಾನಿಲಯದ ಕೆಲಸದ ದಿನಗಳಲ್ಲಿ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 4.00 ರೊಳಗೆ ವಿಶ್ವವಿದ್ಯಾನಿಲಯದ ಎಂ.ಬಿ.ಎ ಅಧ್ಯಯನ ವಿಭಾಗದಲ್ಲಿ ಖುದ್ದಾಗಿ ಅಥವಾ ಅಂಚೆ/ಕೋರಿಯರ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| ಕ್ರ. ಸಂ. | ಶುಲ್ಕ ವಿವರಗಳು | GM/OBC ವಿದ್ಯಾರ್ಥಿಗಳಿಗೆ | SC/ST ವಿದ್ಯಾರ್ಥಿಗಳಿಗೆ | ಪಾವತಿಸುವ ವಿಧಾನ |
|---|---|---|---|---|
| 1 | ಅರ್ಜಿ / ಪರಿಶೀಲನೆ / ಪ್ರವೇಶ ಪರೀಕ್ಷಾ ಶುಲ್ಕ | ರೂ.1,000/- | ರೂ.5,00/- | ಅರ್ಜಿ ಶುಲ್ಕವನ್ನು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು, ಖಾತೆ ಸಂಖ್ಯೆ:40619101261 (IFSC Code:SBIN0040869) ಸಂದಾಯವಾಗುವಂತೆ ಪಾವತಿಸಬಹುದು ಅಥವಾ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ – ಇವರ ಹೆಸರಿನಲ್ಲಿ ಡಿ.ಡಿ. ಮೂಲಕ ಪಾವತಿಸಬಹುದು. |

**ಮೇಲ್ಕಂಡ ಕೋರ್ಸ್‌ನ ಪ್ರವೇಶ ಪರೀಕ್ಷೆಯನ್ನು** ಸಂಬಂಧಪಟ್ಟ ವಿಭಾಗದಲ್ಲಿ **ದಿನಾಂಕ:14.10.2026** ರಂದು ಪೂರ್ವಾಹ್ನ 11.30 AM to 1.30 PM ಗಂಟೆಯೊಳಗಾಗಿ ಏರ್ಪಡಿಸಲಾಗುವುದು. **ಸೀಟು ಹಂಚಿಕೆ ಮತ್ತು ಪ್ರವೇಶ ಪ್ರಕ್ರಿಯೆಗಳನ್ನು ದಿನಾಂಕವನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್:** www.davangereuniversity.ac.in ಸಂಪರ್ಕಿಸಬಹುದಾಗಿದೆ.

**ನಿಬಂಧನೆಗಳು:**

1. **ಪ್ರವೇಶಾತಿ ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್:** www.davangereuniversity.ac.in **ಮೂಲಕ ಡೌನಲೋಡ್ ಮಾಡಿಕೊಂಡು ಭರ್ತಿ ಮಾಡಲಾದ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳನ್ನು ಲಗತ್ತಿಸಿ ಎಂ.ಬಿ.ಎ. ವಿಭಾಗಕ್ಕೆ ವಿದ್ಯಾರ್ಥಿಗಳು ಖುದ್ದಾಗಿ ಅಥವಾ ಅಂಚೆ/ಕೋರಿಯರ್ ಮೂಲಕ ಸಲ್ಲಿಸುವುದು.**
2. ಎಂ.ಬಿ.ಎ ಪ್ರವೇಶಾತಿಗೆ ಯು.ಜಿ.ಸಿ.ಯಿಂದ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರು ಪ್ರವೇಶ ಪರೀಕ್ಷೆಗೆ ಅರ್ಹರಾಗಿರುತ್ತಾರೆ.
3. ಪ್ರವೇಶ ಪರೀಕ್ಷೆಗೆ ಅರ್ಹರಾಗಿರಲು ಸಾಮಾನ್ಯ/ಓಬಿಸಿ ವರ್ಗದ ವಿದ್ಯಾರ್ಥಿಗಳು ಶೆ.50 ರಷ್ಟು ಹಾಗೂ ಪ.ಜಾ/ಪ.ಪಂ/ಪ್ರವರ್ಗ-1ರ ವಿದ್ಯಾರ್ಥಿಗಳು ಶೇ.45 ರಷ್ಟು ಅಂಕಗಳನ್ನು ಸ್ನಾತಕ ಪದವಿಯಲ್ಲಿ ಪಡೆದಿರಬೇಕು.
4. ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಶೈಕ್ಷಣಿಕ ದಾಖಲೆಗಳನ್ನು/ಜಾತಿ ಪ್ರಮಾಣ ಪತ್ರದ ಪ್ರತಿಗಳನ್ನು ಅರ್ಜಿಗಳಿಗೆ ಲಗತ್ತಿಸುವುದು.
5. ಪ್ರವೇಶಾತಿ ಪ್ರಕ್ರಿಯೆಗಳನ್ನು ವಿಶ್ವವಿದ್ಯಾನಿಲಯದ ಪ್ರವೇಶಾತಿ ನಿಯಮಗಳನುಸಾರ ಮೆರಿಟ್ ಕಮ್ ರೋಸ್ಟರ್ (Merit cum Roaster) ಅನುಗುಣವಾಗಿ ಮಾಡಲಾಗುವುದು.

6. ಪ್ರವೇಶ ಪರೀಕ್ಷೆಯ ಸಮಯ, ಫಲಿತಾಂಶವನ್ನು ಮತ್ತು ಪ್ರವೇಶಾತಿ ಶುಲ್ಕ ವಿಭಾಗದ ಸೂಚನಾಫಲಕದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.davangereuniversity.ac.in ನಲ್ಲಿ ಪ್ರಕಟಿಸಲಾಗುವುದು.
7. ಹೆಚ್ಚಿನ ಮಾಹಿತಿಗಾಗಿ ಎಂ.ಬಿ.ಎ. ವಿಭಾಗದ ಅಧ್ಯಕ್ಷರನ್ನು ಕಛೇರಿ ವೇಳೆಯಲ್ಲಿ ಸಮಯ ಬೆಳಿಗ್ಗೆ 10:00 ರಿಂದ ಸಂಜೆ 5:30 ರೊಳಗಾಗಿ ಸಂಪರ್ಕಿಸಬಹುದು ಅಥವಾ ಸಂಯೋಜನಾಧಿಕಾರಿಗಳ (ಎಂ.ಬಿ.ಎ.) ಮೊಬೈಲ್ ನಂ: 8105341095 ಕ್ಕೆ ಕರೆ ಮಾಡಬಹುದು.

| | |
|---|---|
| ವಿಶೇಷ ಸೂಚನೆ: | ಎಂ.ಬಿ.ಎ. ಕೋರ್ಸಿನ ಪ್ರವೇಶಾತಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ವಿಶ್ವವಿದ್ಯಾನಿಲಯವು ಆಗಾಗ್ಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತದೆ. ಅಭ್ಯರ್ಥಿಗಳಿಗೆ ಪ್ರವೇಶಾತಿ ಕುರಿತು ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ. ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ ಮೂಲಕ ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಳನ್ನು ಪಡೆಯಬಹುದಾಗಿದೆ. |

8. ಸದರಿ ಅಧಿಸೂಚನೆಗೆ ಸಂಬಂಧಪಟ್ಟಂತೆ ಮುಂದಿನ ಯಾವುದೇ ಕ್ರಮಗಳಿಗೆ ವಿಶ್ವವಿದ್ಯಾನಿಲಯದ ನಿರ್ಧಾರವೇ ಅಂತಿಮ.
9. ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ಆದೇಶಾನುಸಾರ,

31/01/2026

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577 002.

**ಇವರಿಗೆ:**

1. ಅಧ್ಯಕ್ಷರು, ಎಂ.ಬಿ.ಎ. ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಪ್ರಾಂಶುಪಾಲರು/ಮುಖ್ಯಸ್ಥರು, ಎಂ.ಬಿ.ಎ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.
4. ಪ್ರಾಂಶುಪಾಲರು, ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ & ರೀಸರ್ಚ್, ಲೇಕ್ ವ್ಯೂ ಕ್ಯಾಂಪಸ್, ಎಸ್.ಎಸ್. ಲೇಔಟ್, 'ಬಿ' ಬ್ಲಾಕ್, ದಾವಣಗೆರೆ.
5. ಪ್ರಾಂಶುಪಾಲರು, ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ದಾವಣಗೆರೆ.

**ಪ್ರತಿಗಳು:**

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಸ್ನಾತಕೋತ್ತರ ಅಧ್ಯಯನ ವಿಭಾಗಗಳಿರುವ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಡೀನರು, ಕಲಾ/ವಾಣಿಜ್ಯ/ವಿಜ್ಞಾನ/ಶಿಕ್ಷಣ ನಿಕಾಯಗಳ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ನಿರ್ದೇಕರು, ವಿದ್ಯಾರ್ಥಿ ಕಲ್ಯಾಣ / ಪಿ.ಎಂ.ಇ. ಬೋರ್ಡ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ನಿರ್ದೇಕರು, ಸ್ನಾತಕೋತ್ತರ ಕೇಂದ್ರ ಗುಡ್ಡದರಂಗವ್ವನಹಳ್ಳಿ, ರಾಹೆ-13, ಚಿತ್ರದುರ್ಗ.
8. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ/ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ/ತುಮಕೂರು ವಿಶ್ವವಿದ್ಯಾನಿಲಯ/ಕುವೆಂಪು ವಿಶ್ವವಿದ್ಯಾನಿಲಯ/ಗುಲ್ಬರ್ಗಾ ವಿಶ್ವವಿದ್ಯಾನಿಲಯ/ಮಂಗಳೂರು ವಿಶ್ವವಿದ್ಯಾನಿಲಯ/ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ/ ಕೃಷ್ಣ ದೇವರಾಯ ವಿಶ್ವವಿದ್ಯಾನಿಲಯ/ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ/ಬೆಂಗಳೂರು ವಿಶ್ವವಿದ್ಯಾನಿಲಯ.
9. ಉಪ-ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ ಇವರಿಗೆ ವೃತ್ತ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.
10. ಆಪ್ತ ಕಾರ್ಯದರ್ಶಿಗಳು, ಕುಲಸಚಿವರು/ಕುಲಪತಿಗಳು/ಕುಲಸಚಿವರು ಪರೀಕ್ಷಾಂಗ/ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿಲಯ ನಿರ್ದೇಶಕರು, ಆಕಾಶವಾಣಿ, ಭದ್ರಾವತಿ/ಚಿತ್ರದುರ್ಗ- ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ಸುದ್ದಿ ರೂಪದಲ್ಲಿ ಉಚಿತವಾಗಿ ಪ್ರಸರಿಸಲು ಕೋರಿದೆ.
    ಜಿಲ್ಲಾ ಬುಲೆಟಿನ ಅಧಿಕಾರಿಗಳು, ಜಿಲ್ಲಾಧಿಕಾರಿಗಳವರ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
13. ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಶೈಕ್ಷಣಿಕ/ಸಿಡಿಸಿ/ಮಾಸನಿ/ಸಿಬ್ಬಂದಿ/ಪ್ರಾಧಿಕಾರ/ ಹಣಕಾಸು ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
14. ಹೆಚ್ಚುವರಿ ಪ್ರತಿ/ಕಛೇರಿ ಪ್ರತಿ.